ಕಡೆ ಹಾಗೆ ಇರಬಹುದು, ಕೆಲವು ಕಡೆ ಹಾಗೆ ಇಲ್ಲ. ಉದಾಹರಣೆಗೆ ನಮ್ಮ ನರಗುಂದ, ಉತ್ತರ ಕರ್ನಾಟಕದಲ್ಲಿ ಕೆಲವು ಕಡೆಗಳಲ್ಲಿ ತೊಂದರೆಯಾಗಿದೆ. ಅದಕ್ಕೋಸ್ಕರ ಈಗಲೇ ಸೂಚನೆ ಕಳುಹಿಸದೆ ಇದ್ದರೆ ತಪ್ಪಾಗುತ್ತದೆ. ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ ಪತ್ರ ಬರೆದು ತಿಳಿಸಿ. ಇದು ಬೆಳೆದುಕೊಂಡು ಬಂದಿರತಕ್ಕಂತಹ ಸಂಪ್ರದಾಯ. ಯಾವುದೇ ಕಾರ್ಯಕ್ರಮ ಇದ್ದರೂ ತಾಲ್ಲೂಕಿನ ಶಾಸಕರ ಅಧ್ಯಕ್ಷತೆಯಲ್ಲಿ ಸಮಾರಂಭ ನಡೆಯಬೇಕು. ಕೆಲವು ಕಡೆ ಆ ಲೋಪವಾಗಿದೆ. ನಮ್ಮ ಉಪ ಮುಖ್ಯ ಮಂತ್ರಿಗಳಿದ್ದಾರೆ ಅವರು ಸೂಚನೆ ಕೊಟ್ಟು ನಾಳೆ ಅದು ಕಾರ್ಯ ರೂಪಕ್ಕೆ ಬರುವ ಹಾಗೆ ನೋಡಿಕೊಳ್ಳಬೇಕು.

ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿಗಳು) : ಸಾಮಾನ್ಯವಾಗಿ ಶಾಸಕರು ಧ್ವಜಾರೋಹಣ ಮಾಡುವುದಿಲ್ಲ. ಮೊದಲಿನಿಂದಲೂ ಹಾಗೆಯೇ ಇದೆ. ಅದನ್ನು ಮಾಡಬೇಕೆಂದರೆ ಕಾನೂನು ತಿದ್ದುಪಡಿ ಮಾಡಬೇಕಾಗಿದೆ. ಅಧ್ಯಕ್ಷತೆ ವಹಿಸುವ ಬಗ್ಗೆ ವ್ಯವಸ್ಥೆ ಮಾಡೋಣ. ಈಗಲೇ ಮುಖ್ಯ ಕಾರ್ಯದರ್ಶಿಗಳಿಗೆ ತಿಳಿಸಿ ಸೂಚನೆ ಕಳುಹಿಸುತ್ತೇನೆ.

(ಆ) ವಿಷಯ: ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳಿಗೆ ಉತ್ತರ ಒದಗಿಸುವ ಬಗ್ಗೆ

ಶ್ರೀ ಆರಗ ಜ್ಞಾನೇಂದ್ರ : ಅನ್ ಸ್ಟಾರ್ಡ್ ಪ್ರಶ್ನೆಗೆ ಉತ್ತರ ಬಂದಿಲ್ಲ. ಇದರಲ್ಲಿ ಪ್ರಿಂಟ್ ಆಗಿದೆ ಒಂದು ಉತ್ತರವೂ ಬಂದಿಲ್ಲ. ಇವತ್ತಿನ ಪ್ರಶ್ನೆಗಳಿಗೂ ಉತ್ತರ ಬಂದಿಲ್ಲ, ನಿನ್ನೆಯ ಪ್ರಶ್ನೆಗಳಿಗೂ ಉತ್ತರ ಬಂದಿಲ್ಲ. ಹೋದ ಅಧಿವೇಶನದಲ್ಲಿ ಹಾಕಿದ್ದು ಈ ಸಾರಿ ಅಧಿವೇಶನ ಪ್ರಾರಂಭವಾದಾಗ ಬರುತ್ತವೆ.

ಶ್ರೀ ಜೆ.ಸಿ. ಮಾಧುಸ್ವಾಮಿ (ಕಾನೂನು ಹಾಗು ಸಂಸದೀಯ ವ್ಯವಹಾರಗಳ ಸಚಿವರು): 135 ಉತ್ತರಗಳನ್ನು ಕೊಟ್ಟಿದ್ದೇವೆಂದು ಹೇಳಿದ್ದೇವೆ. ಸ್ಟಾರ್ಡ್ ಪ್ರಶ್ನೆಗಳ ಬಗ್ಗೆ ಉತ್ತರ ಹೇಳುವಾಗ ಒಟ್ಟು 185 ಪ್ರಶ್ನೆಗಳ ಪೈಕಿ 135 ಪ್ರಶ್ನೆಗಳಿಗೆ ಉತ್ತರ ಒದಗಿಸಿದ್ದೇವೆಂದು ಹೇಳಿದ್ದೇವೆ. ಆದ್ದರಿಂದ 60 ಪ್ರಶ್ನೆಗಳಿಗೆ ಯಾವುದು ಉತ್ತರ ಬಂದಿಲ್ಲ ಅದನ್ನು ತಕ್ಷಣ ತಮಗೆ ಮುಟ್ಟಿಸುವ ಹಾಗೆ ವ್ಯವಸ್ಥೆ ಮಾಡುತ್ತೇವೆ.

ಅಧ್ಯಕ್ಷರು : ಮಾನ್ಯ ಸಂಸದೀಯ ಸಚಿವರೇ, ಯಾವುದೇ ಕಾರಣಕ್ಕೆ ಯಾವುದೇ ಪ್ರಶ್ನೆಗೆ ಉತ್ತರ ಈ ಸದನದಲ್ಲಿಯೇ ಸಿಗಬೇಕು. ಆ ರೀತಿ ಮಾಡುವುದು, ಎಲ್ಲಾ ಸಚಿವರಿಗೂ ತಿಳಿಸಬೇಕು. ಇದು ನಿಮ್ಮ ಜವಾಬ್ದಾರಿ. ಕೆಲವು ಅನುಚಿತ ಪದಗಳನ್ನು ಬಳಸಿದ್ದಾರೆಂದು ಕೆಲವರು ಅಭಿಪ್ರಾಯ ವ್ಯಕ್ತಪಡಿಸಿದ್ದೀರಿ, ಅದನ್ನು ನಾನು ನನ್ನ ಛೇಂಬರ್‌ನಲ್ಲಿ ನೋಡಿ ಅದನ್ನು ಯಾವುದನ್ನು ಕಡತದಿಂದ ತೆಗೆದು ಹಾಕಬೇಕು, ಅದನ್ನು ತೆಗೆದು ಹಾಕಿ ಪತ್ರಿಕೆಗಳವರಿಗೆ ಆ ನಂತರ ತಿಳಿಸುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ತಮ್ಮಲ್ಲಿ ವಿನಂತಿ ಮಾಡುವುದು, ಇನ್ನೊಂದು ಸತ್ ಸಂಪ್ರದಾಯ ಇದೆ, ಹಿಂದಿನ ಕಡತಗಳನ್ನು ತೆಗೆದು ನೋಡಿ, ಅನೇಕ ಚರ್ಚೆಗಳು ಆಗಿವೆ, ಅದು ನಿಮ್ಮ ವಿವೇಚನೆಗೆ ಬಿಟ್ಟಿದ್ದು.

ಅಧ್ಯಕ್ಷರು : ಇರಲಿ ಅದು ನಮ್ಮ ವಿವೇಚನೆಗೆ ಬಿಟ್ಟಿದ್ದು.

ಅಧ್ಯಕ್ಷರು : ಈಗ ಸದನವನ್ನು ದಿನಾಂಕ 27.1.05ರ ಗುರುವಾರ ಬೆಳಿಗ್ಗೆ 11.00 ಗಂಟೆವರೆಗೆ ಮುಂದೂಡುತ್ತಿದ್ದೇನೆ.

(ಸದನವು ಮಧ್ಯಾಹ್ನ 2.00 ಗಂಟೆಗೆ ಮುಂದೂಡಲ್ಪಟ್ಟು ಪುನಃ ದಿ: 27.1.05 ರಂದು ಬೆಳಿಗ್ಗೆ 11.00 ಗಂಟೆಗೆ ಸೇರಲು ನಿಶ್ಚಯಿಸಿತು)

ಅನುಬಂಧ 1

199 (424) : ಶ್ರೀ ಅಕ್ಕಿ ಮಲ್ಲಿಕಾರ್ಜುನ್ ಸಹದೇವಪ್ಪ (ಕುಂದಗೋಳ) ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಧಾರವಾಡ ಜಿಲ್ಲೆಯಲ್ಲಿ ಎಷ್ಟು ಪೊಲೀಸ್ ಠಾಣೆಗಳಿವೆ? ಜಿಲ್ಲೆಯಲ್ಲಿರುವ ಪೊಲೀಸ್ ಕಾನ್ಸ್‌ಟೇಬಲ್ ಸಂಖ್ಯೆ ಎಷ್ಟು?

ಆ) ಕಾನ್ಸ್‌ಟೇಬಲ್ ಕೊರತೆ ಎಷ್ಟು?

ಇ) ಕೊರತೆಯನ್ನು ತುಂಬಿಸಲು ಸರ್ಕಾರ ಕೈಗೊಂಡ ಕ್ರಮವೇನು?

ಈ) ಧಾರವಾಡ ಜಿಲ್ಲೆಯಲ್ಲಿ 2001 ರಿಂದ 2004 ರವರೆಗೆ ಒಟ್ಟು ಎಷ್ಟು ದೌರ್ಜನ್ಯ ಪ್ರಕರಣಗಳು ನೊಂದಾಯಿಸಿವೆ?

ಉ) ಕುಂದುಗೋಳ ತಾಲ್ಲೂಕಿನಲ್ಲಿ 2001–04 ರಲ್ಲಿ ಒಟ್ಟು ಎಷ್ಟು ದೌರ್ಜನ್ಯ ಪ್ರಕರಣಗಳು ನೊಂದಾಯಿಸಿದೆ ಹಾಗೂ ಅವುಗಳಲ್ಲಿ ಸುಖಾ ಆದ ಪ್ರಕರಣಗಳೆಷ್ಟು?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು)

ಅ) ಧಾರವಾಡ ಜಿಲ್ಲೆಯಲ್ಲಿ ಒಟ್ಟು 8 ಪೊಲೀಸ್ ಠಾಣೆಗಳಿರುತ್ತವೆ.

ಜಿಲ್ಲೆಯಲ್ಲಿ ಒಟ್ಟು ಪೊಲೀಸ್

ಕಾನ್ಸ್‌ಟೇಬಲ್‌ಗಳ ಸಂಖ್ಯೆ: 232

ಆ) ಮಂಜೂರಾತಿ ಬಲಕ್ಕಿಂತ 44 ಸಿಬ್ಬಂದಿ ಕೊರತೆ ಇರುತ್ತದೆ.

ಇ) ನೇಮಕಾತಿ ಪ್ರಕ್ರಿಯೆಯಲ್ಲಿ ಭರ್ತಿ ಮಾಡಲು ಪರಿಶೀಲಿಸಲಾಗುತ್ತಿದೆ.